# ಬಿಬಿಎಂಪಿ ಜಂಟಿ ಆಯುಕ್ತರ ವಿರುದ್ಧ ಎಫ್ಐಆರ್

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೊಳವೆಬಾವಿಗಳು ಮತ್ತು ಆರ್‌ಒ ಘಟಕಗಳ ನಿರ್ಮಾಣದಲ್ಲಿ ಅವ್ಯವಹಾರ ಸಂಬಂಧಿಸಿದಂತೆ ಬಿಬಿಎಂಪಿ 5 ವಲಯಗಳ ಹಿಂದಿನ ಜಂಟಿ ಆಯುಕ್ತರು ಸೇರಿ ಇತರರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್ಐಆರ್ ದಾಖಲಿಸಿಕೊಂಡಿದೆ.

ಬಿಜೆಪಿ ಮುಖಂಡ ಎನ್. ಆರ್. ರಮೇಶ್ ನೀಡಿದ ದೂರಿನ ಆಧಾರದ ಮೇಲೆ ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ, ಯಲಹಂಕ, ಬ್ಯಾಟರಾಯನಪುರದ ಬಿಬಿಎಂಪಿ ವಲಯಗಳ ಹಿಂದಿನ ಜಂಟಿ ಆಯುಕ್ತರಲ್ಲದೆ ಮುಖ್ಯ ಅಭಿಯಂತರರು, ಕಾರ್ಯಪಾಲಕ ಅಭಿಯಂತರರ ವಿರುದ್ಧವೂ ಎಫ್ಐಆರ್ ದಾಖಲಿಸಲಾಗಿದೆ.

» **ಕೊಳವೆಬಾವಿ ಮತ್ತು ಆರ್‌ಒ ಘಟಕಗಳ ನಿರ್ಮಾಣದಲ್ಲಿ ಅವ್ಯವಹಾರ ಆರೋಪ**

**ಕೋಟ್ಯಂತರ ರೂ. ಅವ್ಯವಹಾರ:** 5 ವಲಯಗಳಲ್ಲಿ 9,588 ಕೊಳವೆಬಾವಿಗಳು ಮತ್ತು 976 ಆರ್‌ಒ ಘಟಕಗಳಿಗೆ ಅನುಮೋದನೆ ನೀಡಲಾಗಿತ್ತು. 2016-17, 2017-18 ಮತ್ತು 2018-19 ರ ಅವಧಿಯಲ್ಲಿ ರಾಜರಾಜೇಶ್ವರಿ ನಗರ, ಬೊಮ್ಮನಹಳ್ಳಿ, ಮಹದೇವಪುರ, ಯಲಹಂಕ ಮತ್ತು ದಾಸರಹಳ್ಳಿ ವಲಯಗಳಲ್ಲಿರುವ 66 ವಾರ್ಡ್‌ಗಳಿಗೆ ಒಟ್ಟು 701.34 ಕೋಟಿ ರೂ. ಬಿಡುಗಡೆಯಾಗಿತ್ತು. 8,426 ಕೊಳವೆಬಾವಿ ಕೊರೆಸಲಾಗಿದೆ. 697 ಆರ್‌.ಒ ಘಟಕ ನಿರ್ಮಿಸಲಾಗಿದೆ. ಆರ್‌.ಒ ಘಟಕದ ನಿರ್ಮಾಣಕ್ಕೆ 7.5 ಲಕ್ಷ ರೂ. ಸಾಕು. ಆದರೆ, ಐದುತೇಕ ಆರ್‌.ಒ. ಘಟಕಗಳ ನಿರ್ಮಾಣಕ್ಕೆ 16 ಲಕ್ಷ ರೂ. ಬಿಡುಗಡೆ ಮಾಡಿ ಅವ್ಯವಹಾರ ನಡೆಸಲಾಗಿದೆ ಎಂದು ರಮೇಶ್ ಆರೋಪಿಸಿದ್ದರು.